**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಗಳು**

**ಹುಕ್ಕೇರಿ**

CC No. 822/2025

PW- 1

ಹೆಸರು : ನಾರಾಯಣಸಿಂಗ ಧರ್ಮಸಿಂಗ ರಜಪೂತ

ವಯಸ್ಸು : 52 ವರ್ಷ

ಉದ್ಯೋಗ : ವ್ಯವಸಾಯ

ವಾಸಸ್ಥಳ : ಮದಮತನಾಳ, ತಾಃ ಹುಕ್ಕೇರಿ

**(ದಿನಾಂಕ 08-06-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಪಾಟಿ ಸವಾಲುಃ ಆರೋಪಿ ಪರ ಶ್ರೀ ಡಿ ಎ ಎ ವಕೀಲರಿಂದ –**

1. ಆರೋಪಿಯು ನನ್ನ ಹೆಂಡತಿಯ ಖಾಸ ಅಕ್ಕ. ಆರೋಪಿಯು ನಮ್ಮ ಮನೆಗೆ ಆಗಾಗ ಬರುತ್ತಿದ್ದರು. ಕೋವಿಡ ಸಮಯದಲ್ಲಿ ನಾನು ಆರೋಪಿಗೆ ರೂ. 1,00,000/- ಕೊಟ್ಟಿದ್ದೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ರೂ. 3,00,000/- ಗಳನ್ನು 2018 ರಲ್ಲಿ ಕೊಟ್ಟಿದ್ದೆ ಎಂದು ಹೇಳುತ್ತಾರೆ. 2018 ರಲ್ಲಿ ನಾನು ನಗದಾಗಿ ಆ ಹಣ ಕೊಟ್ಟಿದ್ದೆ. ರೂ. 3,00,000/- ಹಣ ಇತ್ತು ಎಂದು ತೋರಿಸಲು ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ನಾನು ಬ್ಯಾಂಕ್ ನಲ್ಲಿ  ರೂ. 3,00,000/- ಗಳನ್ನು ನನ್ನ ಜಮೀನಿನ ಮೇಲೇ ಲೋನ್ ಮಾಡಿಸಿ ಹಣ ಕೊಟ್ಟಿದ್ದೆ. ನಾನು ಬೆನಿವಾಡ ಸೊಸೈಟಿಯಲ್ಲಿ ಲೋನ್ ಮಾಡಿದ್ದೆ. ನಾನು ಆ ಕಾಗದ ಪತ್ರಗಳನ್ನು ಹಾಜರು ಮಾಡಬಲ್ಲೆ, ಆರ್ ಟಿ ಸಿ ಅಲ್ಲಿ ಅದರ ಬಗ್ಗೆ ಭೋಜ ಕೂತಿದೆ.

2. ನಾನು ಈ ಕೇಸ್ ಹಾಕುವ ಮುಂಚೆ ಆರೋಪಿಗೆ ನಾನು ಹಣ ಕೊಡುವ ಬಗ್ಗೆ ಯಾವುದೇ ಸಿವಿಲ್ ಸ್ವರೂಪದ ನೋಟಿಸ್ ಕೊಟ್ಟಿಲ್ಲ. ಆ ರೀತಿ ನೋಟಿಸ್ ಕೊಡಲು ನನಗೆ ಅಡಚಣೆ ಇರಲಿಲ್ಲ.

3. ನಾನು ಹಣ ಕೊಡುವಾಗ ಆರೋಪಿ, ಆರೋಪಿ ಗಂಡ ದೀಪಕ್ ಸಿಂಗ್ ಹಾಗೂ ಆರೋಪಿ ಮಗ ಇದ್ದರು. ಆರೋಪಿಯ ಮಗನ ಹೆಸರು ನನಗೆ ಗೊತ್ತಿಲ್ಲ. 2018 ರಲ್ಲಿ ಆರೋಪಿ ನನ್ನ ಕಡೆಯಿಂದ ಯಾವುದೇ ಹಣ ಪಡೆದಿಲ್ಲ ಎಂದರೆ ಸರಿಯಲ್ಲ. 2019 ರಲ್ಲಿ

ಕೋವಿಡ್ ಇದ್ದಾಗ ಆರೋಪಿಯು ನನ್ನ ಕಡೆಯಿಂದ ರೂ. 1,00,000/- ಗಳನ್ನು ಮಾತ್ರ ತೆಗೆದುಕೊಂಡಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಆರೋಪಿ ನನಗೆ ಒಂದು ಖಾಲಿ ಸಹಿ ಮಾಡಿದ ಚೆಕ್ ಕೊಟ್ಟಿದ್ದರು ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆಳರಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೇ**

**ಸಹಿ/-**
(ಆದಿತ್ಯ ಆರ್. ಕಲಾಲ್)
ಸಿ ಜೆ ಮತ್ತು ಜೆ ಎಂ ಎಫ್ ಸಿ, ಹುಕ್ಕೇರಿ

O.S. PW – 1:

**(ದಿನಾಂಕ:08.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಮುಖ್ಯ ವಿಚಾರಣೆ : ವಾದಿ ಪರ ಶ್ರೀ. ವಕೀಲರಿಂದ -**

ನಾನು ಈ ದಾವೆಯಲ್ಲಿ ವಾದಿ ಇರುತ್ತೇನೆ. ಈ ದಿನ ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ನನ್ನ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. ಅದರಲ್ಲಿ ಬರೆದ ಎಲ್ಲ ಸಂಗತಿಗಳು ಸತ್ಯವಾಗಿರುತ್ತದೆ. ಅದಕ್ಕೆ ನಾನು ಸಹಿ ಮಾಡಿರುತ್ತೇನೆ.

ಈ ದಿನ ನಾನು ನನ್ನ ಪರವಾಗಿ ಕೆಲವೊಂದು ದಾಖಲೆಗಳನ್ನು ಸಲ್ಲಿಸುತ್ತಿದ್ದೇನೆ . ಅವುಗಳನ್ನು ನನ್ನ ಪರವಾಗಿ ನಿಶಾನೆಗಳಾಗಿ ಗುರುತಿಸಬೇಕೆಂದು ಕೋರಿಕೊಳ್ಳುತ್ತೇನೆ.

ವಾದಿ ಸಲ್ಲಿಸಿದ ದಾಖಲೆಗಳನ್ನು ಈ ಕೆಳಕಂಡಂತೆ ನಿಶಾನೆಗಳಾಗಿ ಗುರುತಿಸಲಾಗಿದೆ.

| ದಾಖಲಾತಿಗಳ ವಿವರ | ನಿಶಾನೆ |
|---|---|
| ಶಿರಹಟ್ಟಿ ಕೆಡಿ ಗ್ರಾಮದ ಸರ್ವೆ ನಂ. 43 ಕ್ಷೇತ್ರ 18 ಗುಂಟೆ ಜಮೀನಿನ 2024-25 ನೇ ಸಾಲಿನ ಉತಾರ | ನಿ.ಪಿ-1 |
| | ನಿ.ಪಿ-2 |
| | ನಿ.ಪಿ-3 |
| | ನಿ.ಪಿ-4 |

ನನ್ನ ದಾವೆಯನ್ನು ಡಿಕ್ರಿ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

**ಪಾಟಿ ಸವಾಲು: ಪ್ರತಿವಾದಿ ಪರ ಶ್ರೀಃ ವಕೀಲರಿಂದಃ-.**

ನಾನು ಶಾಲೆ ಕಲಿತಿಲ್ಲ.

ನಾನು ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು)**

**(ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು)**

**(ಪ್ರತಿವಾದಿ ಪರ ವಕೀಲರು ಗೈರು ಹಾಜರ ಇದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆಳರಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೇ**

(ಆದಿತ್ಯ ಆರ್. ಕಲಾಲ್)
**ಸಿ ಜೆ ಮತ್ತು ಜೆ ಎಂ ಎಫ್ ಸಿ, ಹುಕ್ಕೇರಿ.**